ದಿನಾಂಕ 19.04.2024 ರಂದು ಸಾಕ್ಷಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಮುಂದುವರೆದ ಮುಖ್ಯ ವಿಚಾರಣೆ ಅರ್ಜಿದಾರರ ಪರ ವಕೀಲರಿಂದಃ-

ಗಾಯದ ಪ್ರಮಾಣ ಪತ್ರದ ದೃಢೀಕೃತ ನಕಲನ್ನು ನಿಪಿ-10 ಎಂದು ಗುರುತಿಸಲಾಯಿತು. ಅರ್ಜಿಯನ್ನು ಪುರಸ್ಕರಿಸುವಂತೆ ಕೋರುತ್ತೇನೆ.

ಪಾಟೀ ಸವಾಲು 2ನೇ ಎದುರುದಾರರ ಪರ ಶ್ರೀ ಹೆಚ್.ಕೆ.ಆರ್., ವಕೀಲರಿಂದಃ-

ನಾನು ಜನಪದಲೋಕದ ಕಾಮತ್ ಹೋಟೆಲ್‌ನಲ್ಲಿ ಸಪ್ಲೈಯರ್ ಆಗಿ ಕೆಲಸ ಮಾಡುತ್ತಿದ್ದೇನೆ. ನನಗೆ ಪ್ರತಿ ದಿನಕ್ಕೆ 450/- ರೂಗಳ ಸಂಬಳ ಹಾಗೂ ಟಿಪ್ಸ್ ಸೇರಿ ದಿನಕ್ಕೆ 1,500/- ರೂಗಳ ಆದಾಯವಿರುತ್ತದೆ. ನನ್ನ ಚಾಲನಾ ಪರವಾನಗಿ ಇರುತ್ತದೆ. ನಾನು 2016ರಲ್ಲಿ ಚಾಲನಾ ಪರವಾನಗಿಯನ್ನು ಪಡೆದುಕೊಂಡಿರುತ್ತೇನೆ. ನನ್ನ ಚಾಲನಾ ಪರವಾನಗಿಯನ್ನು ನಾನು ಹಾಜರುಪಡಿಸಬಹುದು. ನಾನು ನನ್ನ ಹೆಸರಿನಲ್ಲಿನ ಮೋಟಾರ್ ವಾಹನವನ್ನು ಚಾಲನೆ ಮಾಡಿಕೊಂಡು ಹೋಗುತ್ತಿದ್ದೆನು. ನಾನು ಬಜಾಜ್ ವಿಮೆ ಕಂಪನಿಯಿಂದ ನನ್ನ ವಾಹನಕ್ಕೆ ವಿಮೆ ಪಡೆದುಕೊಂಡಿದ್ದೆನು. ನನ್ನ ವಾಹನದ ವಿಮೆ ಪ್ರತಿಯನ್ನು ಹಾಗೂ ನನ್ನ ಹೆಸರಿನಲ್ಲಿನ ಆರ್.ಸಿ ಹಾಜರುಪಡಿಸಬಹುದು. ಅಪಘಾತಕ್ಕೆ ಸಂಬಂಧಿಸಿದಂತೆ ನಾನು ನಮ್ಮ ವಾಹನಕ್ಕೆ ವಿಮೆ ನೀಡಲಾದ ಬಜಾಜ್ ಕಂಪನಿಗೆ ಮಾಹಿತಿ ಕೊಟ್ಟಿಲ್ಲ.

2. ಈ ಅಪಘಾತಕ್ಕೆ ಸಂಬಂಧಿಸಿದಂತೆ ಪೊಲೀಸ್ ಠಾಣೆಯಲ್ಲಿ ನಾನು ದೂರನ್ನು ಸಲ್ಲಿಸಿರುತ್ತೇನೆ. ನಾನು ಅಪಘಾತವಾದ ದಿನದಂದೇ ದೂರನ್ನು

ದಾಖಲಿಸಿರುತ್ತೇನೆ. ನಾನು ಎಸ್.ಎಸ್.ಎಲ್.ಸಿ.,ವರೆಗೆ ಓದಿದ್ದೇನೆ. ನಾನು ದೂರಿನಲ್ಲಿ ನನ್ನ ವಾಹನಕ್ಕೆ ಅಪಘಾತಪಡಿಸಿದ ವಾಹನದ ನೋಂದಣಿ ಸಂಖ್ಯೆಯನ್ನು ಹೇಳಿದ್ದೆನು. ದೂರಿನಲ್ಲಿ ಹಾಗೂ ಪ್ರಥಮ ವರ್ತಮಾನ ವರದಿಯಲ್ಲಿ ನಾನಾಗಲೀ ಅಥವಾ ನನ್ನ ತಂದೆಯಾಗಲೀ ನನ್ನ ವಾಹನಕ್ಕೆ ಅಪಘಾತಪಡಿಸಿದ ವಾಹನದ ನೋಂದಣಿ ಸಂಖ್ಯೆಯನ್ನು ಹೇಳಿ ಬರೆಸಿಲ್ಲ ಎನ್ನುವುದು ಸರಿಯಲ್ಲ. ನನಗೆ ಅಪಘಾತವಾದ ಕೂಡಲೇ ಅಪಘಾತಪಡಿಸಿದ ಬಸ್ಸಿನ ನೋಂದಣಿ ಸಂಖ್ಯೆ ಗೊತ್ತಾಯಿತು. ನನಗೆ ಸದರಿ ಬಸ್ಸಿನ ನೋಂದಣಿ ಸಂಖ್ಯೆಯನ್ನು ಪೂರ್ತಿಯಾಗಿ ಹೇಳಲು ಗೊತ್ತಿಲ್ಲ. ಅರ್ಜಿಯಲ್ಲಿ ಹಾಗೂ ನನ್ನ ಪ್ರಮಾಣಪತ್ರದಲ್ಲಿ ನನಗೆ ಅಪಘಾತಪಡಿಸಿದ ಬಸ್ಸಿನ ನೋಂದಣಿ ಸಂಖ್ಯೆ ಟಿ.ಆರ್ ಕೆಎ-2766 ಆಗಿರುತ್ತದೆ ಎಂದು ಬರೆಸಲಾಗಿದೆ.

3. ಅಪಘಾತ ಸಂಭವಿಸಿರುವುದು ಬೆಂಗಳೂರು-ಮೈಸೂರು ಹೆದ್ದಾರಿಯ ಕನಕಪುರ ವೃತ್ತದಲ್ಲಿ ಎನ್ನುವುದು ನಿಜ. ಆ ಸಮಯದಲ್ಲಿ ನನ್ನ ಜೊತೆ ಬೇರೆ ಯಾರೂ ಇರಲಿಲ್ಲ. ಆಗ ನಾನು ಹೆಲ್ಮೆಟ್ ಧರಿಸಿದ್ದೆನು. ಪೊಲೀಸರ ಮುಂದೆ ನಾನು ನೀಡಿದ ಹೇಳಿಕೆಯಲ್ಲಿ ನಾನು ಹೆಲ್ಮೆಟ್ ಧರಿಸಿದ್ದೆ ಎನ್ನುವುದನ್ನು ಹೇಳಿದ್ದೆನು. ಅಪಘಾತ ಸಂಭವಿಸಿರುವುದು ರಸ್ತೆಯ ಮಧ್ಯಭಾಗದಲ್ಲಿ ಎನ್ನುವುದು ನಿಜ. ಈಗ ನನಗೆ ತೋರಿಸಿದ ಪೊಲೀಸರು ತಯಾರು ಮಾಡಿರುವ ಅಪಘಾತ ಸ್ಥಳದ ನಕ್ಷೆ ಸರಿ ಇರುತ್ತದೆ. ಸಾಕ್ಷಿಗೆ 2ನೇ ಎದುರುದಾರರ ಪರ ವಕೀಲರು ತೋರಿಸಿ ಸಾಕ್ಷಿಯು ಒಪ್ಪಿದ ದಾಖಲೆಯ ಕೃತ್ಯ ಸ್ಥಳದ ಕಚ್ಚಾ ನಕ್ಷೆಯ ಯಥಾ ನಕಲಾಗಿದ್ದು ಸಾಕ್ಷಿಯು ಅದನ್ನು ನೋಡಿ ಒಪ್ಪಿದ ಕಾರಣ ಅದನ್ನು ನಿಆರ್-1 ಎಂದು ಗುರುತಿಸಲಾಯಿತು.

4. ಅಪಘಾತವಾದ ಸ್ಥಳದಲ್ಲಿ ಟ್ರಾಫಿಕ್ ದೀಪವನ್ನು ಅಳವಡಿಸಲಾಗಿತ್ತು. ನಿಪಿ-6 ರ ಪ್ರಕಾರ ಬಸ್ಸಿನ ಮುಂದಿನ ಬಲಭಾಗ ಜಖಂಗೊಂಡಿತ್ತು ಎಂದು ಕಾಣಿಸಲಾಗಿದೆ ಎನ್ನುವ ಬಗ್ಗೆ ನನಗೆ ಗೊತ್ತಿಲ್ಲ. ಸದರಿ ಬಸ್ ಚನ್ನಪಟ್ಟಣದ ಕಡೆಯಿಂದ ಕನಕಪುರದ ಕಡೆಗೆ ತಿರುವು ಪಡೆಯುತ್ತಿದ್ದಾಗ ಅಪಘಾತ ಸಂಭವಿಸಿರುತ್ತದೆ. ಅಪಘಾತವಾದ ಸಮಯದಲ್ಲಿ ನಾನು ಚನ್ನಪಟ್ಟಣದ ಕಡೆಯಿಂದ ಕನಕಪುರದ ಕಡೆಗೆ ಹೋಗುತ್ತಿದ್ದೆ ಎನ್ನುವುದು ಸರಿಯಲ್ಲ. ಸಾಕ್ಷಿಯು ಮುಂದುವರೆದು ನಾನು ರಾಮನಗರದ ಕಡೆಯಿಂದ ಚನ್ನಪಟ್ಟಣದ ಕಡೆಗೆ ಹೋಗುತ್ತಿದ್ದೆನು ಎಂದು ನುಡಿಯುತ್ತಾರೆ. ನನ್ನ ಮೋಟಾರ್ ಸೈಕಲ್‌ನ ಮುಂಭಾಗ ಸಂಪೂರ್ಣವಾಗಿ ಜಖಂಗೊಂಡಿತ್ತು ಎನ್ನುವುದು ನಿಜ. ಅಪಘಾತವಾದ ಸಮಯದಲ್ಲಿ ನಾನು ಹೆಲ್ಮೆಟ್ ಧರಿಸದೇ ಚಾಲನಾ ಪರವಾನಗಿ ಹೊಂದದೇ ನಿಧಾನವಾಗಿ ತಿರುವು ಪಡೆದುಕೊಳ್ಳುತ್ತಿದ್ದ ಬಸ್ಸಿಗೆ ನನ್ನ ಅಜಾಗರೂಕತೆಯಿಂದ ಡಿಕ್ಕಿಪಡಿಸಿದೆ ಎನ್ನುವುದು ಸರಿಯಲ್ಲ. ನನ್ನ ಅಜಾಗರೂಕತೆಯನ್ನು ಮುಚ್ಚಿಡುವ ಉದ್ದೇಶದಿಂದ ಕೃತ್ಯ ಸ್ಥಳದ ಕಚ್ಚಾ ನಕ್ಷೆಯ ಪ್ರತಿಯನ್ನು ನಾನು ಹಾಜರುಪಡಿಸಿಲ್ಲ ಎನ್ನುವುದು ಸರಿಯಲ್ಲ.

5. ನನ್ನ ಮುಖಕ್ಕೆ ಹಾಗೂ ನನ್ನ ಬಲಗಾಲಿಗೆ ತೀವ್ರ ಸ್ವರೂಪದ ಪೆಟ್ಟಾಗಿತ್ತು. ರಾಮಕೃಷ್ಣ ಆಸ್ಪತ್ರೆಯಲ್ಲಿ ನನ್ನ ಬಲಗಾಲಿಗೆ ರಾಡನ್ನು ಅಳವಡಿಸಲಾಗಿರುತ್ತದೆ. ನಾನು ಹಾಜರುಪಡಿಸಿರುವ ನಿಪಿ-7 ಡಿಸ್ಚಾರ್ಜ್ ಸಮ್ಮರಿಯ ಪ್ರಕಾರ ನನ್ನ ಕಾಲಿಗೆ ಯಾವುದೇ ಶಸ್ತ್ರಚಿಕಿತ್ಸೆಯನ್ನು ಮಾಡಲಾಗಿಲ್ಲ ಎನ್ನುವುದು ಸರಿಯಲ್ಲ. ನಾನು ರಾಮಕೃಷ್ಣ ಆಸ್ಪತ್ರೆಯಲ್ಲಿ ಅಲ್ಲದೇ ಕೆ.ಆರ್ ಪೇಟೆಯ ಡಾ.ಅರವಿಂದ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದುಕೊಂಡಿರುತ್ತೇನೆ. ಅದಕ್ಕೆ ಸಂಬಂಧಿಸಿದ ದಾಖಲೆ ಇರುವುದಿಲ್ಲ.

ನಾನು ರಾಮಕೃಷ್ಣ ಆಸ್ಪತ್ರೆಯಿಂದ ಬಿಡುಗಡೆಗೊಂಡ ನಂತರದಲ್ಲಿ ಒಂದು ಬಾರಿ ಸದರಿ ಆಸ್ಪತ್ರೆಗೆ ಹೋಗಿರುತ್ತೇನೆ. ನನ್ನ ಮುಖಕ್ಕೆ ಪ್ಲೇಟನ್ನು ಅಳವಡಿಸಲಾಗಿರುತ್ತದೆ.

6. ನಾನು ಹಾಜರುಪಡಿಸಿರುವ ಬಿಲ್ಲುಗಳ ಪೈಕಿ 1,95,000/- ರೂಗಳ ಬಿಲ್ಲಿಗೆ ಸಂಬಂಧಿಸಿದ ಪಾವತಿ ರಶೀದಿ ಇರುವುದಿಲ್ಲ. ಸದರಿ ಬಿಲ್ಲುಗಳಿಗೆ ಸಂಬಂಧಿಸಿದ ಸಲಹಾ ಚೀಟಿಗಳನ್ನು ನಾನು ಹಾಜರುಪಡಿಸಿದ್ದೇನೆ. ನಾನು ಹಾಜರುಪಡಿಸಿರುವ ಬಿಲ್ಲುಗಳಿಗೆ ಪೂರಕವಾದ ರಶೀದಿಗಳನ್ನು ಹಾಜರುಪಡಿಸದೇ ಸದರಿ ಬಿಲ್ಲುಗಳನ್ನು ಈ ಪ್ರಕರಣಕ್ಕಾಗಿ ಸೃಷ್ಟಿಸಿದ್ದೇನೆ ಎನ್ನುವುದು ಸರಿಯಲ್ಲ. ನನ್ನ ಪ್ರಮಾಣಪತ್ರದಲ್ಲಿ ಹೇಳಿರುವ ಆಸ್ಪತ್ರೆಯ ಖರ್ಚು ವೆಚ್ಚ ಏಳೂವರೆ ಲಕ್ಷ ರೂಗಳು ಎನ್ನುವುದು ಸುಳ್ಳು ಎನ್ನುವುದು ಸರಿಯಲ್ಲ. ನನ್ನ ಕಾಲಿಗೆ ಶಸ್ತ್ರಚಿಕಿತ್ಸೆಯಾಗಿದೆ ಎಂದು ಹೇಳುವ ಸಂಬಂಧ ಯಾವುದೇ ದಾಖಲೆ ಇಲ್ಲದೇ ಈ ಬಗ್ಗೆ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ. ನನಗೆ ಮತ್ತೊಂದು ಶಸ್ತ್ರಚಿಕಿತ್ಸೆಯಾಗಬೇಕು ಎನ್ನುವ ಸಂಬಂಧ ವೈದ್ಯರು ಅಂದಾಜು ವೆಚ್ಚದ ಪಟ್ಟಿಯನ್ನು ಕೊಟ್ಟಿರುವುದಿಲ್ಲ. ನನ್ನ ಆದಾಯಕ್ಕೆ ಸಂಬಂಧಿಸಿದಂತೆ ಪೂರಕ ದಾಖಲೆ ಇರುತ್ತದೆ. ಅದಕ್ಕೆ ಸಂಬಂಧಿಸಿದ ದಾಖಲೆಯನ್ನು ನಾನು ಹಾಜರುಪಡಿಸಬಹುದು.

7. ಅಪಘಾತವಾದ ಸಮಯದಲ್ಲಿ ನಾನು ಸಪ್ಲೈಯರ್ ಕೆಲಸ ಮಾಡುತ್ತಿರಲಿಲ್ಲ ಎನ್ನುವುದು ಹಾಗೂ ನನಗೆ ದಿನಕ್ಕೆ 1,500/- ರೂಗಳ ಆದಾಯವಿರಲಿಲ್ಲ ಎನ್ನುವುದು ಸರಿಯಲ್ಲ. ನನಗೆ ಯಾವುದೇ ಕೆಲಸ ಮಾಡಲು ಸಾಧ್ಯವಾಗುತ್ತಿಲ್ಲ ಎಂದು ಹೆಚ್ಚಿನ ಪರಿಹಾರ ಸಿಗಲಿ ಎಂಬ

ಉದ್ದೇಶಕ್ಕಾಗಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ. ದಾಖಲಾತಿಗಳನ್ನು ಸೃಷ್ಟಿಸಿ, ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ.

ಮರು ವಿಚಾರಣೆ : ಇಲ್ಲ

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಿದೆ)

(ಸಾಕ್ಷಿಗೆ ಸಾಕ್ಷ್ಯವನ್ನು ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ)

**(ಸರಸ್ವತಿ ಕೆ.ಎನ್.)**
ರಾಮನಗರದ ಮೋಟಾರು ವಾಹನಗಳ ಅಪಘಾತದ
ಪರಿಹಾರಗಳ ಹೆಚ್ಚುವರಿ ನ್ಯಾಯ ಮಂಡಳಿಯ
ಪೀಠಾಧಿಕಾರಿಗಳು.